7. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

8. ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1993

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಬಹಳ ಸಣ್ಣ ವಿಧೇಯಕ. ಈಗ ಸಿವಿಲ್ ನ್ಯಾಯ ಸ್ಥಾನಕ್ಕೆ ಲಘು ವ್ಯಾಜ್ಯ ತೀರ್ಮಾನ ಮಾಡುವುದಕ್ಕೆ ಮಿತಿ 3 ಸಾವಿರ ರೂಪಾಯಿ ಇದೆ. ಮುನ್ಸೀಫ್ ಕೋರ್ಟ್ನವರಿಗೆ 500 ರೂಪಾಯಿ ಇದೆ. ಉಚ್ಚ ನ್ಯಾಯಾಲಯದ ಸಲಹೆ ಮೇರೆಗೆ ಈ ಮಿತಿಯನ್ನು ಸಿವಿಲ್ ನ್ಯಾಯಾಲಯಗಳಿಗೆ 25 ಸಾವಿರ ರೂಪಾಯಿ ಮತ್ತು ಮುನ್ಸೀಫ್ ನ್ಯಾಯಾಲಯಗಳಿಗೆ 3 ಸಾವಿರ ರೂಪಯಿ ಆಗಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರ ಪರಿಣಾಮವಾಗಿ ಅನೇಕ ಸಿವಿಲ್ ವ್ಯವಹಾರಗಳು ತಕ್ಷಣ ತೀರ್ಮಾನವಾಗಿ ಬೇಗ ನ್ಯಾಯ ನಿರ್ವಹಣೆ ಆಗುವುದಕ್ಕೆ ಅವಕಾಶವಾಗುತ್ತದೆ. ಈ ತಿದ್ದುಪಡಿಯನ್ನು ಸಭೆ ಅಂಗೀಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತಿದ್ದುಪಡಿಯನ್ನು ನಾವು ಜನತೆಯ ಹಿತದೃಷ್ಟಿಯಿಂದ ಸ್ವಾಗತಿಸುತ್ತೇವೆ. ಇದರ ಬಗ್ಗೆ ಚರ್ಚೆ ಮಾಡತಕ್ಕದ್ದು ಏನೂ ಇಲ್ಲ. ಇದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಈ ತಿದ್ದುಪಡಿಯನ್ನು ನಾವು ಒಪ್ಪಬಹುದಾಗಿದೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ "1993ರ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3 :

ಅಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 4ಕ್ಕೆ ತಿದ್ದುಪಡಿ :

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಖಂಡ 4ರಲ್ಲಿ ತಿದ್ದುಪಡಿ ತಂದಿದ್ದು ಅದು ಈ ರೀತಿ ಇದೆ :